## ‘ಓಲ್ಡ್ ಗೋಲ್ಡ್ ಬಿಕಂ ಎವರ್‌ಗ್ರೀನ್’

# ಹಳೆಯ ಚಿನ್ನ; ಈಗಲೂ ಚೆನ್ನ

**ಸಾಂಪ್ರದಾಯಿಕ ಒಡವೆಗಳು ಆಧುನಿಕ ಸ್ಪರ್ಶ, ಸಮಕಾಲೀನ ಟ್ರೆಂಡ್‌ನೊಂದಿಗೆ ಮತ್ತೆ ಮಹಿಳೆಯರನ್ನು ಸೆಳೆಯುತ್ತಿವೆ. ಅಜ್ಜಿಯರ ಕಾಲದ ಒಡ್ಯಾಣ, ಕಾಸಿನ ಸರ, ಗೆಜ್ಜೆಮಾಲಾಕ್, ಜುಮುಕಿ ಇಂದು ಹೊಸ ವಿನ್ಯಾಸದೊಂದಿಗೆ ಫ್ಯಾಷನ್‌ಪ್ರಿಯರ ಮನತಣಿಸುತ್ತಿದೆ.**

■ **ಯು. ವೇಣೂರು**

ಹಣತೆ ಹಚ್ಚಿ ದೀಪ ಬೆಳಗಿ, ಪೂಜೆ ಮಾಡಿ, ಸಿಹಿ ಊಟ ಮಾಡುವ ದೊಡ್ಡಹಬ್ಬ ದೀಪಾವಳಿಗೆ ದೀಪಗಳಷ್ಟೇ ಪ್ರಕಾಶಿಸುವ ರೇಷ್ಮೆ ಸೀರೆ, ಬಂಗಾರದೊಡವೆ ಇಲ್ಲದಿದ್ದರೆ ಹೇಗೆ? ಹಬ್ಬದ ಸಂಭ್ರಮ ಇಮ್ಮಡಿಸುವುದೇ ಕಡುಬಣ್ಣದ ಜಗಮಗಿಸುವ ಪಲ್ಲು ಇರುವ ರೇಷ್ಮೆ ಸೀರೆ ಉಟ್ಟು ಅದಕ್ಕೊಪ್ಪುವ ಚಿನ್ನದ ಆಭರಣ ಧರಿಸಿಕೊಂಡಾಗಲೇ.

ಇದೀಗ ಸಾಂಪ್ರದಾಯಿಕ ಹಬ್ಬಕ್ಕೆ ಪಾರಂಪರಿಕ ಒಡವೆಗಳು ಸಾಥಿ ಕೊಡುತ್ತಿವೆ. ಹೆರಿಟೇಜ್ ಆಭರಣಗಳು ಆಧುನಿಕ ಸ್ಪರ್ಶದೊಂದಿಗೆ ಹೆಂಗಳೆಯರ ಮನತಣಿಸುತ್ತಿದೆ. ತಿಜೋರಿಯಿಂದ ರೇಷ್ಮೆ ಸೀರೆ ತೆಗೆದು ಅಷ್ಟೇ ಬಿಗುಮಾನದಿಂದ ವೈವಿಧ್ಯಮಯ ಒಡವೆ ಹಾಕಿಕೊಂಡು ಹಬ್ಬವನ್ನು ಆಚರಿಸುವುದರಲ್ಲಿಯೇ ಮಹಿಳೆಯರ ಸಂಭ್ರಮವೂ ಅಡಗಿದೆ.

ಹಿಂದೆಲ್ಲ ಅಜ್ಜಿಯ ಕತ್ತಿನಲ್ಲಿ ಮಿಂಚುತ್ತಿದ್ದ ಕಾಸಿನ ಸರ ಇದೀಗ ಫ್ಯಾಷನ್ ಸ್ಪರ್ಶದೊಂದಿಗೆ ಮೊಮ್ಮಗಳ ಕೊರಳನ್ನು ಅಲಂಕರಿಸುತ್ತಿದೆ. ಅಮ್ಮಂದಿರು ಕಿವಿತುಂಬ ಕಾಣುವಂತೆ ತೊಡುತ್ತಿದ್ದು, ಔಟ್‌ಡೇಟೆಡ್ ಎನಿಸಿದ್ದ ಕೆಂಪು ಹರಳಿನ ಜುಮುಕಿ ಮತ್ತೆ ಹೊಸ ಅವತಾರದೊಂದಿಗೆ ಮಗಳ ಕಿವಿಯಲ್ಲಿ ನೇತಾಡುತ್ತಿದೆ. ಮಿರಿಮಿರಿ ಮಿಂಚುತ್ತಿದ್ದ ಉದ್ದನೆಯ ಹಾರ ಮದುವೆ, ಮುಂಜಿಗಳಂತಹ ಸಮಾರಂಭಗಳಲ್ಲಿ ಎಳೆಹುಡುಗಿಯರ ಕೊರಳನ್ನು ಅಲಂಕರಿಸುತ್ತಿದೆ. ಚಂದದ ನೆಕ್ಲೇಸ್, ಅಂದದ ಬಳೆಗಳು ಆಧುನಿಕತೆಯ ಛಾಪಿನೊಂದಿಗೆ ಮತ್ತೆ ಪ್ರತ್ಯಕ್ಷ. ಹೀಗೆ ಹಿಂದಿನ ಕಾಲದ ಒಡವೆಗಳೆಲ್ಲಾ ಈಗ ಮತ್ತೆ ಫ್ಯಾಷನ್ ಟ್ರೆಂಡ್ ಆಗಿದೆ.

ಸಂಪ್ರದಾಯ ಲಾಗಾಯ್ತಿನದ್ದಾದರೂ ಅದು ಎಂದಿಗೂ ಫ್ಯಾಷನ್‌ನೊಂದಿಗೆ ಅವಿನಾಭಾವ ಸಂಬಂಧ ಇಟ್ಟುಕೊಂಡಿದೆ. ಪಾರಂಪರಿಕ ಲುಕ್ ಇದ್ದರೂ ಸಮಕಾಲೀನ ಟ್ರೆಂಡ್‌ನೊಂದಿಗೆ ಯುವತಿಯರ ಮನತಣಿಸುತ್ತಿದೆ. ಅದು ಬೈತಲೆ ಬೊಟ್ಟು ಆಗಿರಲಿ, ಸರವೇ ಇರಲಿ, ಹೊನ್ನಿನ ಮೇಲೆ ಮುತ್ತು, ಪಚ್ಚೆ, ನೀಲ, ಹವಳಗಳನ್ನು ಕೂರಿಸಿ ಹೊಸ ವಿನ್ಯಾಸದೊಂದಿಗೆ ಬಂದ ಆಭರಣ ಸೀರೆಯ ಬಣ್ಣಕ್ಕೆ ಮ್ಯಾಚಿಂಗ್ ಆಗಿ ‘ಮಿಕ್ಸ್ ಅಂಡ್ ಮ್ಯಾಚ್’ ಪರಿಕಲ್ಪನೆಯನ್ನು ನೆನಪಿಗೆ ತರುತ್ತದೆ.

‘ತಮ್ಮ ಮನೆಯಲ್ಲಿದ್ದ ಅನಾದಿ ಕಾಲದ ಒಡವೆಯನ್ನು ಮಳಿಗೆಗೆ ತಂದರೆ ಪರಂಪರೆಗೆ ಕೊಂಚವೂ ಹಾನಿಯಾಗದಂತೆ ಹೊಸ ರೂಪದಲ್ಲಿ ಒಡವೆಗಳನ್ನು ವಿನ್ಯಾಸ ಮಾಡಲಾಗುತ್ತದೆ. ಒಡವೆ ಧರಿಸುವ ಮಹಿಳೆಯರ ಮನದ ಭಾವನೆಗಳನ್ನು ಒಡವೆಯಲ್ಲಿ ಪಡಿಮೂಡಿಸುವ ಪ್ರಯತ್ನ ಮಾಡುತ್ತೇವೆ. ಬೈತಲೆಬೊಟ್ಟು, ಜುಮುಕಿ, ನೆಕ್ಲೇಸ್, ಓಲೆ, ಬಳೆ ಮುಂತಾದವು ಹಳೆಯ ನೆನಪುಗಳನ್ನು ಮೆಲುಕು ಹಾಕುವಂತೆ ಮಾಡಿ ವಿಭಿನ್ನವಾಗಿ ವಿನ್ಯಾಸ ಮಾಡಲಾಗುತ್ತದೆ’ ಎಂದು ಹೇಳುತ್ತಾರೆ ಜ್ಯುವೆಲ್ಲರಿ ವರ್ತಕ ಪವನ್ ಕುಮಾರ್.



‘ಟು ಇನ್‌ವನ್’ ಪರಿಕಲ್ಪನೆಯನ್ನೂ ಒಡವೆಗಳಲ್ಲಿ ಪಡಿಮೂಡಿಸುತ್ತೇವೆ. ಜುಮ್ಕಾ, ಜಡೆಬಿಲ್ಲೆಗಳನ್ನು ನೆಕ್‌ಪೀಸ್ ಆಗಿಯೂ ಬಳಸಬಹುದು. ಸರವನ್ನು ಎರಡೆಳೆಯಾಗಿ ಧರಿಸಿ ಗಿಡ್ಡವಾಗಿ ಕತ್ತುತುಂಬ ಕಾಣಬೇಕೆನಿಸಿದರೆ ನೆಕ್ಲೇಸ್ ತರ ಫೋಲ್ಡ್ ಮಾಡಿಯೂ ಧರಿಸಿಕೊಳ್ಳಬಹುದು. ಒಂದೇ ಒಡವೆ ‘ಮಲ್ಟಿಪರ್ಪಸ್ ಆಭರಣ’ವಾಗಿದೆ. ಇವೆಲ್ಲವೂ ಫ್ಯಾಷನ್‌ಪ್ರಿಯರನ್ನು ಸೆಳೆಯುವುದರಲ್ಲಿ ಸಂಶಯವಿಲ್ಲ’ ಎಂಬುದು ಪವನ್ ಅನಿಸಿಕೆ.

### ಕಸೂತಿಯಂತಿವೆ ಒಡವೆಗಳು

ಚಿನ್ನದ ಅಡಿಪಾಯವಿರುವ ಒಡವೆಗೆ ಅಮೆರಿಕನ್ ಡೈಮಂಡ್, ಕಲರ್ ಡೈಮಂಡ್, ಮುತ್ತು, ಹವಳ, ನೀಲ ಪಚ್ಚೆ ಮುಂತಾದ ನವರತ್ನಗಳನ್ನು ಸೇರಿಸಿ ಕಸೂತಿ ವಿನ್ಯಾಸದಲ್ಲಿ ಸಿದ್ಧಪಡಿಸಿದ ಒಡವೆ ಇಂದಿನ ಹೊಸ ಫ್ಯಾಷನ್ ಟ್ರೆಂಡ್. ಕಂಠಿಹಾರ, ಕಾಸಿನ ಸರ, ಗೆಜ್ಜೆಮಾಲಾಕ್, ಅವಲಕ್ಕಿ ಸರ, ಕೊತ್ತಂಬರಿ ಸರ, ಜುಮುಕಿ, ಕಿವಿಯೋಲೆ ಅಷ್ಟೇ ಏಕೆ ಹಳೆಯ ಬೆಳ್ಳಿಯ ಒಡವೆ ಕೂಡ ಹೊಸ ವಿನ್ಯಾಸ ಪಡೆದುಕೊಳ್ಳುತ್ತಿದೆ.

ಏನೇ ಆದರೂ ಚಿನ್ನ ಆಪದ್ಧನ ಅಲ್ಲವೇ? ಆದರೆ ಇಂದಿನ ಗಗನಕ್ಕೇರಿದ ಚಿನ್ನದ ಬೆಲೆಯಲ್ಲಿ ಹೊಸ ಚಿನ್ನವನ್ನು ಖರೀದಿಸುವುದು ಎಂದರೆ ಅದು ಮಧ್ಯಮವರ್ಗದವರಿಗೆ ಗಗನಕುಸುಮವೇ ಸರಿ. ಮನೆಯಲ್ಲಿ ಅಜ್ಜಿಯರ ಕಾಲದ ಚಿನ್ನವಿದ್ದರೆ ಅದನ್ನೇ ಧರಿಸಿ. ಈಗಿನ ಫ್ಯಾಷನ್ ಕೂಡ ಅದೇ. ‘ಓಲ್ಡ್ ಈಸ್ ಗೋಲ್ಡ್’, ಓಲ್ಡ್ ಗೋಲ್ಡ್ ಈಸ್ ಎವರ್‌ಗ್ರೀನ್ ಟ್ರೆಂಡ್’ ಎಂಬಂತಾಗಿದೆ ಈಗಿನ ಫ್ಯಾಷನ್ ಜಗತ್ತು. ■